**ರಾಜ್ಯ ಶೈಕ್ಷಣಿಕ ಸಂಶೋಧನ ಹಾಗೂ ಪ್ರಶಿಕ್ಷಣ ಪರಿಷದ್, ಮಹಾರಾಷ್ಟ್ರ, ಪುಣೆ**

**ನಿಪುಣ ಭಾರತ - ಅಧ್ಯಯನ ಅಭ್ಯಾಸ ಸರ್ವೇಕ್ಷಣ**

**ವಿಷಯ - ಪ್ರಥಮ ಭಾಷೆ (ಕನ್ನಡ) : ಮೂರನೆಯ ತರಗತಿ**

**ಅಧ್ಯಯನ ನಿಷ್ಪತ್ತಿ ಕ್ರ. ೧ :** ಕಥೆ, ಕವಿತೆ ಅಥವಾ ಸಂಭಾಷಣೆ ಪಠ್ಯದಲ್ಲಿಯ ಘಟನೆಗಳು ಮತ್ತು ಪಾತ್ರಗಳ ಬಗ್ಗೆ ಮಾತನಾಡುತ್ತಾನೆ.

**ಶಿಕ್ಷಕರಿಗೆ ಸೂಚನೆಗಳು :**

- ಕವಿತೆಯನ್ನು ಸ್ವರ ಮತ್ತು ಲಯದಲ್ಲಿ ಹೇಳುವುದನ್ನು ಶಿಕ್ಷಕರು ಮಕ್ಕಳಿಗೆ ಹಾಡಿ ತೋರಿಸಬೇಕು.
- ಕವಿತೆಯನ್ನು ಹಾಡುವ ಮೊದಲು ಮಕ್ಕಳಿಗೆ ಕವಿತೆಯನ್ನು ಎಚ್ಚರಿಕೆಯಿಂದ ಆಲಿಸಲು ಮತ್ತು ಅದರ ಬಗ್ಗೆ ಪ್ರಶ್ನೆಗಳನ್ನು ಕೇಳಲು ಸೂಚಿಸಬೇಕು.
- ಕವಿತೆಯನ್ನು ಪ್ರತಿ ಮಗುವಿಗೆ ಪ್ರತ್ಯೇಕವಾಗಿ ಹಾಡಿ ತೋರಿಸಿ ಮತ್ತು ನಂತರ ಕವಿತೆಯ ಆಧಾರದ ಮೇಲೆ ಮುಂದಿನ ಪ್ರಶ್ನೆಗಳನ್ನು ಕೇಳಬೇಕು.
- ಒಂದು ಪ್ರಶ್ನೆಗೆ ಉತ್ತರಿಸಲು ವಿದ್ಯಾರ್ಥಿಗಳಿಗೆ ೧೦ ಸೆಕೆಂಡುಗಳ ಸಮಯ ಕೊಡಬೇಕು. ಒಂದು ವೇಳೆ ವಿದ್ಯಾರ್ಥಿಯು ೧೦ ಸೆಕೆಂಡುಗಳಲ್ಲಿ ಪ್ರಶ್ನೆಯ ಉತ್ತರ ಉತ್ತರಿಸಲು ಸಾಧ್ಯವಾಗದಿದ್ದರೆ ಅವನಿಗೆ ಮುಂದಿನ ಪ್ರಶ್ನೆಯನ್ನು ಕೇಳಿರಿ.

**ಪಠ್ಯ ವಾಚನ :**

| | | |
|---|---|---|
| ಅಪ್ಪ | : | ಗಣು, ಓ ನಾನು ಮಾರ್ಕೆಟಿಗೆ ಹೋಗುವೆ. ಏನಾದರೂ ತರಬೇಕೆ ? |
| ಗಣು | : | ನನಗೆ ನೀಲಿ ಪೆನ್ ತನ್ನಿ. |
| ತಾಯಿ | : | ಸಕ್ಕರೆ ಮತ್ತು ರವೆಯನ್ನು ತನ್ನಿ. |
| ನೀಲಮ್ | : | ಅಪ್ಪಾ, ನನಗೆ ಎರಡು ಪುಸ್ತಕಗಳನ್ನು ತಂದುಕೊಡು. |
| ಅಪ್ಪ | : | ಸರಿ, ನೀಲಮ್ ನೀನು ನನ್ನ ಜೊತೆ ಮಾರುಕಟ್ಟೆಗೆ ಬರುತ್ತೀಯಾ ? |
| ನೀಲಮ್ | : | ಇಲ್ಲ ಅಪ್ಪಾ, ನಾನು ಓದಲು ಬಯಸುತ್ತೇನೆ. ನಾಳೆ ನಮಗೆ ಪರೀಕ್ಷೆ ಇದೆ. |
| ಅಪ್ಪ | : | ಸರಿ, ನಾನೇ ಹೋಗಿ ಬರುತ್ತೇನೆ. |
| ಗಣು | : | ಅಮ್ಮಾ, ಇವತ್ತು ನನ್ನ ಇಷ್ಟದ ಅಡುಗೆ ಮಾಡುತ್ತೀಯಾ ? |
| ತಾಯಿ | : | ಹೌದು, ತುಪ್ಪವನ್ನೂ ತನ್ನಿ. |
| ಅಪ್ಪ | : | ಹೌದು, ತರುತ್ತೇನೆ. |

| ಪ್ರಶ್ನೆ | ಉತ್ತರ |
|---|---|
| ೧) ಯಾರು ಮಾರುಕಟ್ಟೆಗೆ ಹೋಗುತ್ತಿದ್ದರು ? | ಅಪ್ಪ |
| ೨) ಈ ಸಂಭಾಷಣೆ ಎಷ್ಟು ಜನರೊಂದಿಗೆ ನಡೆದಿದೆ ? | ನಾಲ್ಕು |
| ೩) ನೀಲಮ್ ಅಪ್ಪನಿಗೆ ಮಾರುಕಟ್ಟೆಯಿಂದ ಏನು ತರಬೇಕೆಂದು ಕೇಳಿದಳು ? | ಎರಡು ಪುಸ್ತಕ |
| ೪) ಸಕ್ಕರೆ ಮತ್ತು ರವೆ ತರಲು ತಾಯಿ ಏಕೆ ಕೇಳಿದಳು ? | ತಾಯಿ ಶಿರಾ ಮಾಡುವವಳಿದ್ದಳು. |
| ೫) ನೀಲಮ್ ಅಪ್ಪನೊಂದಿಗೆ ಏಕೆ ಮಾರುಕಟ್ಟೆಗೆ ಹೋಗಲಿಲ್ಲ ? | ಅವಳ ಪರೀಕ್ಷೆ ಇತ್ತು. ಅವಳಿಗೆ ಅಭ್ಯಾಸ ಮಾಡಬೇಕಾಗಿತ್ತು. |

**ಮೂಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ವಿಷಯದ ಆಧಾರದ ಮೇಲೆ ೪ ರಿಂದ ೫ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುತ್ತಾನೆ/ ಉತ್ತರಿಸುವಳು. | ೩ |
| ವಿಷಯದ ಆಧಾರದ ಮೇಲೆ ೨ ರಿಂದ ೩ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುವನು/ ಉತ್ತರಿಸುವಳು. | ೨ |
| ವಿಷಯದ ಆಧಾರದ ಮೇಲೆ ೧ ಪ್ರಶ್ನೆಗೆ ಸರಿಯಾಗಿ ಉತ್ತರಿಸುವನು/ಉತ್ತರಿಸುವಳು. | ೧ |
| ಯಾವುದೇ ಪ್ರಶ್ನೆಗೆ ಸರಿಯಾಗಿ ಉತ್ತರಿಸಲು ಸಾಧ್ಯವಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೨ :** ಸ್ವಂತ ಭಾಷೆಯ ಶೈಲಿಯನ್ನು ಬಳಸಿಕೊಂಡು ಸ್ವಂತ ಭಾಷೆಯಲ್ಲಿ ಕಥೆ ಅಥವಾ ಕವಿತೆಯನ್ನು ಹೇಳುತ್ತಾರೆ.

**ಶಿಕ್ಷಕರಿಗೆ ಸೂಚನೆಗಳು :**

- ಶಿಕ್ಷಕರು ತಾವು ಓದಿದ ಅಥವಾ ಕೇಳಿದ್ದನ್ನು ನೆನಪಿಸಿಕೊಳ್ಳುವಂತೆ ಮಕ್ಕಳನ್ನು ಕೇಳಬೇಕು.
- ಕಥೆಯನ್ನು ನೆನಪಿಸಿಕೊಳ್ಳಲು ೨೦ ಸೆಕೆಂಡುಗಳನ್ನು ನೀಡಿ ಸಾಂಪ್ರದಾಯಿಕ ಕಥೆಯಲ್ಲಿನ ಹೆಸರುಗಳನ್ನು ಹೇಳುವ ಮೂಲಕ ಅವರಿಗೆ ನೆನಪಿಸಿಕೊಳ್ಳಲು ಸಹಾಯ ಮಾಡಿರಿ.
- ಈಗ ಕಥೆ ಹೇಳಲು ಹೇಳಿ, ಓದಿದ ಅಥವಾ ಕೇಳಿದ ಯಾವುದೇ ಕಥೆಯನ್ನು ಹೇಳಲು ಹೇಳಿ.
- ಕಥೆ ಹೇಳಲು ೨ ನಿಮಿಷ ಸಮಯ ಕೊಡಿರಿ.

**ಮೌಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ವಿಷಯದ ಆಧಾರದ ಮೇಲೆ ಪ್ರಾರಂಭ, ಮಧ್ಯ ಮತ್ತು ಅಂತ್ಯ ಈ ಕ್ರಮದಲ್ಲಿ ೧೦ ರಿಂದ ೧೨ ವಾಕ್ಯಗಳಲ್ಲಿ ಕಥೆ ಹೇಳುವರು. | ೩ |
| ವಿಷಯದ ಆಧಾರದ ಮೇಲೆ ಪ್ರಾರಂಭ, ಮಧ್ಯ ಮತ್ತು ಅಂತ್ಯ ಈ ಕ್ರಮದಲ್ಲಿ ೬ ರಿಂದ ೯ ವಾಕ್ಯಗಳಲ್ಲಿ ಕಥೆ ಹೇಳಲು ಪ್ರಯತ್ನ ಮಾಡುವರು. | ೨ |
| ವಿಷಯದ ಆಧಾರದ ಮೇಲೆ ೪ ರಿಂದ ೫ ವಾಕ್ಯಗಳನ್ನು ಹೇಳುವರು. | ೧ |
| ಒಂದೇ ಒಂದು ವಾಕ್ಯ ಹೇಳುತ್ತಾರೆ/ಮಾತನಾಡುತ್ತಾರೆ ಅಥವಾ ಮಾತನಾಡುವುದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೩ :** ಮಾಹಿತಿ ಇರುವ ಅಥವಾ ಮಾಹಿತಿ ಇರಲಾರದ ಪರಿಚ್ಛೇದದ ವಾಚನ ಮಾಡುತ್ತಾನೆ ಮತ್ತು ಅದರ ಬಗ್ಗೆ ಮಾತನಾಡುವನು. ಉದಾ : ಪರಿಚ್ಛೇದದ ಆಧಾರಿತ ಚಿತ್ರಗಳು, ಧ್ವನಿ ಚಿಹ್ನೆಗಳು ಇವುಗಳ ಮಾಹಿತಿ ಪಡೆಯುವನು. ತಿಳಿದಿರುವ ಮಾಹಿತಿಯ ಆಧಾರದ ಮೇಲೆ ವಾಕ್ಯವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡುವನು.

**ಶಿಕ್ಷಕರಿಗೆ ಸೂಚನೆಗಳು :**

- ಶಿಕ್ಷಕರು ಮಕ್ಕಳಿಗೆ ಓದಲು ಪರಿಚ್ಛೇದವಿರುವ ಕಾರ್ಡುಗಳನ್ನು ಕೊಡಬೇಕು.
- ಮಕ್ಕಳಿಗೆ ಪರಿಚ್ಛೇದ ಎಚ್ಚರಿಕೆಯಿಂದ ಓದಲು ಹೇಳಿ ಪರಿಚ್ಛೇದ ಓದಿದ ನಂತರ ಪ್ರಶ್ನೆ ಕೇಳಲಾಗುತ್ತದೆ ಎಂದು ಸೂಚಿಸಿರಿ.
- ಒಂದು ಪದವನ್ನು ಓದಲು ಮಗುವಿಗೆ ೫ ಸೆಕೆಂಡುಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡರೆ ನಂತರ ಮುಂದಿನ ಪದ ಓದಲು ಹೇಳಿರಿ.

- ಚಿಹ್ನೆಗಳ ಗುರುತು
  ೧) ಯಾವುದೇ ಪದವನ್ನು ಓದದಿದ್ದರೆ ಅಥವಾ ತಪ್ಪಾಗಿ ಓದಿದರೆ ಅದನ್ನು (/) ಎಂದು ಗುರುತಿಸಿರಿ.
  ೨) ಸರಿಯಾದ ಪದ ಓದಿದ ನಂತರ ಅಥವಾ ತಾನು ಸರಿಪಡಿಸಿಕೊಂಡು ಓದಿದ ಪದಗಳಿಗೆ (∅) ಈ ಚಿಹ್ನೆಯೊಂದಿಗೆ ಗುರುತಿಸಿರಿ.

**ಪರಿಚ್ಛೇದ (ಪಠ್ಯ) ವಾಚನ :**

ರೂಪೇಶ್ ಅವರ ಪ್ರವಾಸ ಮಧುಬನ್ ಉದ್ಯಾನಕ್ಕೆ ಹೋಗಿತ್ತು. ಉದ್ಯಾನದಲ್ಲಿ ಜಾರುಬಂಡಿ, ಜೋಕಾಲಿಗಳು ಇದ್ದವು. ವಿವಿಧ ಹೂ, ಹಣ್ಣಿನ ಗಿಡಗಳಿದ್ದವು. ರೂಪೇಶ್‌ನು ಹೂವನ್ನು ಕೀಳಲು ಹೂವಿಗೆ ಕೈ ಹಚ್ಚಿದನು. ಆದರೆ ತಕ್ಷಣ ರೂಪೇಶ್ ಉದ್ಯಾನ ಪ್ರವೇಶಿಸುವಾಗ ಮಹಿಳೆ ನೀಡಿದ ಸಲಹೆಯನ್ನು ನೆನಪಿಸಿಕೊಂಡನು. ಉದ್ಯಾನದ ಸುತ್ತಲೂ ನಡೆಯಿರಿ. ಬಹಳಷ್ಟು ಆಟವಾಡಿ, ಆದರೆ ಎಲೆಗಳನ್ನು, ಹೂಗಳನ್ನು ಹರಿಯಬೇಡಿರಿ. ಇದು ಉದ್ಯಾನದ ಸೌಂದರ್ಯವಾಗಿದೆ. ರೂಪೇಶ್ ತಕ್ಷಣ ಕೈ ಹಿಂತೆಗೆದುಕೊಂಡನು. ಹೂಗಳ ಕಡೆ ನೋಡಿದನು. ಎಲ್ಲಾ ಹೂಗಳು ಸಂತೋಷದಿಂದ ನೃತ್ಯ ಮಾಡುತ್ತಿದ್ದವು.

**ಮೂಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ನಿಗದಿತ ಸಮಯದಲ್ಲಿ ಆರೋಹಣ ಮತ್ತು ಅವರೋಹಣದೊಂದಿಗೆ ಸ್ಪಷ್ಟ ಉಚ್ಚಾರಣೆ, ಸರಿಯಾದ ಗತಿ ಮತ್ತು ವಿರಾಮಚಿಹ್ನೆಯೊಂದಿಗೆ ವಾಚನ ಮಾಡುವನು. | ೩ |
| ನಿಗದಿತ ಸಮಯದಲ್ಲಿ ಸ್ಪಷ್ಟ ಉಚ್ಚಾರ, ಸರಿಯಾದ ಗತಿ ಮತ್ತು ಪದಗಳ ಸ್ವಯಂ ತಿದ್ದುಪಡಿ ಮಾಡಿಕೊಂಡು ಶಬ್ದಗಳನ್ನು ಜೋಡಿಸಿ ವಾಚನ ಮಾಡುವನು. | ೨ |
| ನಿಗದಿತ ಸಮಯಕ್ಕಿಂತ ಹೆಚ್ಚು ಕಾಲ ಪದಗಳನ್ನು ಅಥವಾ ಅಕ್ಷರಗಳನ್ನು ತೊದಲು ವಾಚನ ಮಾಡುವನು. | ೧ |
| ಒಂದೇ ಒಂದು ಪದವನ್ನು ಸರಿಯಾಗಿ ಓದುವುದಿಲ್ಲ ಅಥವಾ ಏನನ್ನೂ ಹೇಳುವುದಿಲ್ಲ. | ೦ |

**ಶಿಕ್ಷಕರಿಗೆ ಸೂಚನೆಗಳು :**

- ಮಗುವು ಕಥೆಯನ್ನು ಓದುವುದನ್ನು ನಿಲ್ಲಿಸಿದಾಗ ಅವನಿಂದ ಕಥೆಯನ್ನು ತೆಗೆದುಕೊಳ್ಳಬೇಕು.
- ಮಗು ಕಥೆಯನ್ನು ಓದಿದ ನಂತರ, ಕಥೆಯ ಆಧಾರದ ಮೇಲೆ ಒಂದೊಂದು ಪ್ರಶ್ನೆಯನ್ನು ಕೇಳಿ.
- ಮಗುವಿಗೆ ೧೫ ಸೆಕೆಂಡುಗಳ ಒಳಗೆ ಉತ್ತರಿಸಲು ಸಾಧ್ಯವಾಗದಿದ್ದರೆ ೨ ಪ್ರಶ್ನೆಯ ಸಲವಾಗಿ 'ಉತ್ತರವಿಲ್ಲ' ಎಂದು ಗುರುತಿಸಿ ಮತ್ತು ಮುಂದಿನ ಪ್ರಶ್ನೆಯನ್ನು ಕೇಳಿ.
- ಎರಡು ಬಾರಿ ಪ್ರಶ್ನೆಗಳನ್ನು ಕೇಳಬೇಡಿ. ಮಗುವು ನನಗೆ ಗೊತ್ತಿಲ್ಲ ಎಂದು ಹೇಳಿದರೆ ಆಯ್ಕೆಯು ೦/ ತಪ್ಪಾಗಿದೆ ಎಂದು ಗುರುತಿಸಿ.

| ಪ್ರಶ್ನೆ | ಉತ್ತರ |
|---|---|
| ೧) ರೂಪೇಶನು ಪ್ರವಾಸಕ್ಕೆ ಎಲ್ಲಿಗೆ ಹೋಗಿದ್ದನು? | ಮಧುಬನ್ ಉದ್ಯಾನದಲ್ಲಿ |
| ೨) ಉದ್ಯಾನದಲ್ಲಿ ಯಾವ ಯಾವ ಆಟಿಕೆಗಳಿದ್ದವು? | ಜಾರುಬಂಡಿ, ಜೋಕಾಲಿ |
| ೩) ಉದ್ಯಾನವನ್ನು ಸುಂದರವಾಗಿಸುವುದು ಯಾವುದು? | ಎಲೆಗಳು, ಹೂಗಳು |
| ೪) ಸುಂದರವಾದ ಹೂಗಳನ್ನು ನೋಡಿದ ರೂಪೇಶ್ ಏನು ಮಾಡಬೇಕೆಂದು ಬಯಸಿದನು ? | ಹೂ ಹರಿಯಬೇಕೆಂದು ಬಯಸಿದನು |
| ೫) ರೂಪೇಶನು ಏಕೆ ಹೂಗಳನ್ನು ಹರಿಯಲಿಲ್ಲ ? | ಹೂಗಳನ್ನು ಕತ್ತರಿಸದಂತೆ ಮಹಿಳೆ ಸಲಹೆ ಕೊಟ್ಟಿದ್ದಳು |

ವಿದ್ಯಾರ್ಥಿಗಳು ನೀಡಿದ ಸರಿಯಾದ ಉತ್ತರಗಳ ಸಂಖ್ಯೆ ........ ೫/...

**ಮೌಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ಪರಿಚ್ಛೇದದಲ್ಲಿ ವಿಷಯದ ಆಧಾರದ ಮೇಲೆ ೪ ರಿಂದ ೫ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುತ್ತಾನೆ/ ಉತ್ತರಿಸುತ್ತಾಳೆ. | ೩ |
| ಪರಿಚ್ಛೇದದಲ್ಲಿ ವಿಷಯದ ಆಧಾರದ ಮೇಲೆ ೨ ರಿಂದ ೩ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುತ್ತಾನೆ/ ಉತ್ತರಿಸುತ್ತಾಳೆ. | ೨ |
| ಪರಿಚ್ಛೇದದಲ್ಲಿಯ ವಿಷಯದ ಆಧಾರದ ಮೇಲೆ ೧ ಪ್ರಶ್ನೆಗೆ ಸರಿಯಾಗಿ ಉತ್ತರಿಸುತ್ತಾನೆ/ ಉತ್ತರಿಸುತ್ತಾಳೆ. | ೧ |
| ಯಾವುದೇ ಪ್ರಶ್ನೆಗೆ ಸರಿಯಾಗಿ ಉತ್ತರಿಸಲು ಸಾಧ್ಯವಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ.೪ :** ತಿಳಿದಿರುವ ಕವಿತೆಗಳು ಮತ್ತು ಹಾಡುಗಳಿಂದ ಪ್ರಾಸಬದ್ಧ ಅಂತಹುದೇ ಪದಗಳನ್ನು ಹೇಳುತ್ತಾರೆ ಮತ್ತು ಬರೆಯುತ್ತಾರೆ.

**ಶಿಕ್ಷಕರಿಗೆ ಸೂಚನೆಗಳು :**

- ಶಿಕ್ಷಕರು ಮುಂದಿನ ಪದಗಳಿರುವ ಕಾರ್ಡಶೀಟನ್ನು ಮಕ್ಕಳಿಗೆ ಓದಲು ಕೊಡಬೇಕು.
- ಪದಗಳನ್ನು ಓದಿದ ನಂತರ ಮಕ್ಕಳಿಗೆ ಅಂತ್ಯದ ಧ್ವನಿಯೊಂದಿಗೆ ಹೊಂದಾಣಿಕೆ/ಪ್ರಾಸಬದ್ಧ ಪದವನ್ನು ಬರೆಯಲು ಹೇಳಿರಿ.
- ಒಂದು ಪದದ ಕನಿಷ್ಠ ೨ ಪ್ರಾಸಬದ್ಧ ಪದಗಳನ್ನು ಬರೆಯಲು ಹೇಳಿರಿ.

ಪ್ರಶ್ನೆ ೧ ಕೊಟ್ಟಿರುವ ಪದಗಳಿಗೆ ಪ್ರಾಸಬದ್ಧ ಪದಗಳನ್ನು ಬರೆಯಿರಿ. ಉದಾ. : ಹಳ್ಳಿ-ಬಳ್ಳಿ

೧) ಜನ

೨) ಸರ

೩) ನಲಿ

೪) ಆಟ

೫) ರಾಗ

**ಮೂಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ೪ ರಿಂದ ೫ ಪದಗಳ ಸರಿಯಾದ ಪ್ರಾಸಬ್ಧ ಪದಗಳನ್ನು ಬರೆಯುತ್ತಾನೆ/ಬರೆಯುತ್ತಾಳೆ. | ೩ |
| ೨ ರಿಂದ ೩ ಪದಗಳ ಸರಿಯಾದ ಪ್ರಾಸಬದ್ಧ ಪದಗಳನ್ನು ಬರೆಯುತ್ತಾನೆ/ಬರೆಯುತ್ತಾಳೆ. | ೨ |
| ಒಂದೇ ಪದದ ಸರಿಯಾದ ಪ್ರಾಸಬದ್ಧ ಪದ ಬರೆಯುತ್ತಾನೆ/ಬರೆಯುತ್ತಾಳೆ. | ೧ |
| ಯಾವುದೇ ಸರಿಯಾದ ಪ್ರಾಸಬದ್ಧ ಪದಗಳನ್ನು ಬರೆಯಲಾಗಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೫ :** ಸರಿಯಾದ ಪದಗಳು/ವಾಕ್ಯಗಳನ್ನು ಬಳಸಿ ಬರೆಯಲು ಪ್ರಯತ್ನಿಸುವದು (ಸಾಂಪ್ರದಾಯಿಕ ಬರವಣಿಗೆ ಮತ್ತು ವಿವಿಧ ರೀತಿಯ ಅಭಿವ್ಯಕ್ತಿಗಳು)

**ಶಿಕ್ಷಕರಿಗೆ ಸೂಚನೆಗಳು :**

- ಶಿಕ್ಷಕರು ಮಕ್ಕಳಿಗೆ ಚಿತ್ರದ ಕಾರ್ಡ್‌ಶೀಟ್ ಹಾಳೆಯನ್ನು ಅವರ ಕೈಯಲ್ಲಿ ಕೊಡಬೇಕು. ಅದನ್ನು ಎಚ್ಚರಿಕೆಯಿಂದ ಗಮನಿಸಲು ಹೇಳಬೇಕು.
- ಮಗುವಿಗೆ ಚಿತ್ರವನ್ನು ನೋಡಲು ಮತ್ತು ವಾಕ್ಯವನ್ನು ಹೊಂದಿಸಲು ಗರಿಷ್ಠ ಒಂದು ನಿಮಿಷದ ಅವಕಾಶ ಕೊಡಿರಿ.
- ಗಮನಿಸಿದ ನಂತರ ನಾಲ್ಕೈದು ವಾಕ್ಯಗಳನ್ನು ಬರೆಯಲು ಹೇಳಿರಿ.



**ಮೂಲ್ಯಮಾಪನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ಚಿತ್ರವನ್ನು ಗಮನಿಸಿದ ನಂತರ ಸರಿಯಾದ ವಿರಾಮ ಚಿಹ್ನೆಯೊಂದಿಗೆ ೪ ರಿಂದ ೫ ವಾಕ್ಯಗಳನ್ನು ಬರೆಯುವರು. | ೩ |
| ಚಿತ್ರವನ್ನು ಗಮನಿಸಿದ ನಂತರ ಸರಿಯಾದ ವಿರಾಮ ಚಿಹ್ನೆಯೊಂದಿಗೆ ೨ ರಿಂದ ೩ ವಾಕ್ಯಗಳನ್ನು ಬರೆಯುವರು. | ೨ |
| ಚಿತ್ರವನ್ನು ಗಮನಿಸಿದ ನಂತರ ಒಂದು ವಾಕ್ಯವನ್ನು ಮಾತ್ರ ಸರಿಯಾಗಿ ಬರೆಯುವರು, ವಿರಾಮ ಚಿಹ್ನೆಯನ್ನು ಬಳಸುವದಿಲ್ಲ, | ೧ |
| ಒಂದೇ ಒಂದು ವಾಕ್ಯವನ್ನೂ ಬರೆಯುವದಿಲ್ಲ. | ೦ |

❑❑❑